ನಡೆಸಿದ ನಂತರ ಸದನದಲ್ಲಿ ಭಾಗವಹಿಸಿ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದೇನೆ. ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿರುವ ವಿಚಾರದಲ್ಲೂ ಕೂಡ ಈ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಒಂದು ಶೂನ್ಯ ವೇಳೆಯ ನನಗೆ ವಿಷಯ ಸಂಬಂಧಪಟ್ಟದ್ದು ಇರಲಿಲ್ಲ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಿತ್ತು ಆದ್ದರಿಂದ ಆ ವಿಷಯವನ್ನು ಅವರಿಗೆ transfer ಮಾಡಿ ಹೋಗಿದ್ದೆ. ಆದಾದ ನಂತರ ವಿಧಾನ ಪರಿಷತ್‌ನಿಂದ ಕರೆ ಬಂದ ಕಾರಣ ವಿಧಾನ ಪರಿಷತ್‌ನ ಕಾರ್ಯಕಲಾಪದಲ್ಲಿ ನಾನು ಭಾಗವಹಿಸಿ, 3.30 ನಿಮಿಷಕ್ಕೆ ನನ್ನ ಕಛೇರಯಲ್ಲಿ ಊಟ ಮುಗಿಸಿ ನಂತರ ಕಛೇರಿಗೆ ಬರುವ ಜನರನ್ನು ನೋಡುತ್ತಿದ್ದೆ. ಆ ಬಳಿಕ ನನ್ನ ಕ್ಷೇತ್ರದಲ್ಲಿ ಹಿಂದೂ ಪ್ರಕರಣ ಶಂಕಿತ ಪ್ರಕರಣವಾಗಿದ್ದರಿಂದ ಐದು ದಿನಗಳಿಂದ ನಮ್ಮ ನಾಯಕರೊಬ್ಬರಿಗೆ ಹುಷಾರಿಲ್ಲದ ಕಾರಣ ತಕ್ಷಣವೇ ಅಲ್ಲಿಗೆ ಹೋಗಬೇಕಾದ್ದರಿಂದ ಅಲ್ಲಿಗೆ ಹೋಗಿ ಸಂಜೆ 7.30 ಗಂಟೆಗೆ ವಾಪಸ್ಸಾಗಿ ಇದೇ ಸದನದಲ್ಲಿ Calling Attention ನಲ್ಲಿ ಉತ್ತರವನ್ನು ಕೊಟ್ಟಿದ್ದೇವೆ. ಇದರ ಮಧ್ಯದಲ್ಲಿ ಹಿಂದಿನ ಅದರ ಹಿಂದಿನ ದಿನದಿಂದಲೂ ಕೂಡ ಸದನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆ. ತಪ್ಪು ಕಲ್ಪನೆಯಿಂದ ಕೆಲವು ಮಾಹಿತಿಗಳು ತಮ್ಮ ಗಮನಕ್ಕೆ ಬಂದಿರುವುದರಿಂದ ನನ್ನ ಬಗ್ಗೆ ಕೆಲವು remarks ಆಯಿತು. ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕು ಮತ್ತು ಮಾಧ್ಯಮದಲ್ಲಾಗುತ್ತಿರುವ ಪ್ರಚಾರವನ್ನು ನಿಲ್ಲಿಸಿ, ಸರಿಯಾದ ಮಾಹಿತಿಯನ್ನೇನು ತಮ್ಮ ಮುಖಾಂತರ ನೀಡುತ್ತಿದ್ದೀರಿ ಅದಕ್ಕೂ ಅಷ್ಟೇ ಪ್ರಚಾರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಮಾಧ್ಯಮದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಕಡತದಿಂದ ಆ ವಿಷಯವನ್ನು ತೆಗೆಯಿರಿ.

ಅಧ್ಯಕ್ಷರು : – ಕಡತದಿಂದ ತೆಗೆಯಿರಿ.

2. ವಿಷಯ : ಲಿಖಿತ ಉತ್ತರಗಳನ್ನು ಸೂಕ್ತ ವೇಳೆಯಲ್ಲಿ ಒದಗಿಸುವ ಬಗ್ಗೆ.

ಶ್ರೀ ಕೃಷ್ಣ ಬೈರೇಗೌಡ (ಬ್ಯಾಟರಾಯನಪುರ) : – ಮಾನ್ಯ ಅಧ್ಯಕ್ಷರೆ ತಮ್ಮಲ್ಲೊಂದು ಮನವಿ, ಲಿಖಿತ ಉತ್ತರಗಳಿಗೆ ಕೊಡುವ ಪ್ರಶ್ನೆಗಳಿಗೆ ಸರ್ಕಾರ ತಮ್ಮ ಮುಂದೆ ಒಪ್ಪಿಕೊಂಡರು ಸಹ ಉತ್ತರಗಳನ್ನು ಕೊಡುತ್ತಿಲ್ಲ. ತಮ್ಮಲ್ಲಿ ನಾನು ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ.

ಶ್ರೀ ವೆಂಕಟರಾವ್ ನಾಡಗೌಡ : – ಬಹಳಷ್ಟು ಉತ್ತರಗಳು ಬಂದಿಲ್ಲ.

ಶ್ರೀ ಕೃಷ್ಣ ಬೈರೇಗೌಡ : – ಬಹಳ ಬೇಜವಾಬ್ದಾರಿತನದಿಂದ ಸರ್ಕಾರ ನಡೆದುಕೊಳ್ಳುತ್ತಿದೆ. ಇಲ್ಲ ಈ ಅವಕಾಶವನ್ನು ತೆಗೆದುಹಾಕಿ. ಆ provision ತೆಗೆದುಬಿಡಿ. ಒಬ್ಬ ಶಾಸಕರು ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಇವತ್ತು ಕೊಡುತ್ತೇವೆ ನಾಳೆ ಕೊಡುತ್ತೇವೆಂದು ಕಾಲ ಕಳೆದು ನಮ್ಮ ಗೌರವವನ್ನು ಕಡಿಮೆ ಮಾಡುವ ಹಾಗಿದ್ದರೆ ಇದೇ ಸದನದಲ್ಲಿ, ನಾವು ಯಾರ ಹತ್ತಿರ ನಮ್ಮ ಗೌರವನ್ನು ಉಳಿಸಿಕೊಳ್ಳುವುದು. ಬಹಳ ಒತ್ತಾಯದಿಂದ ಮತ್ತೊಮ್ಮೆ ಮನವಿ ಮಾಡುತ್ತೇನೆ. ತಾವು ಅದಕ್ಕೆ ನಿರ್ದಿಷ್ಟವಾದ ಒಂದು ನಿಬಂಧನೆಯನ್ನು ಹಾಕಿ ಇಂತಹ ದಿನಗಳಲ್ಲಿ ಉತ್ತರಗಳನ್ನು ಕೊಡುತ್ತೇವೆಂಬ ನಿಬಂಧನೆಯನ್ನು ಮಾಡಲಿಲ್ಲವೆಂದರೆ ನೀವು ಲಿಖಿತ ಉತ್ತರಗಳ provision ಅನ್ನೇ ತೆಗೆದು ಹಾಕಿ. ಇದು ವಿಡಂಬನೆ ಆಗುವುದು ಬೇಡ. ಇಲ್ಲಿ ನಮ್ಮನ್ನು ನಾವೇ ವಿಡಂಬನೆ ಮಾಡಿಕೊಳ್ಳುತ್ತಿದ್ದೇವೆ. ತಮ್ಮಿಂದ ನಾವು ಒಂದು ಸ್ಪಷ್ಟವಾದ ಪರಿಹಾರವನ್ನು ನಿರೀಕ್ಷೆ ಮಾಡುತ್ತಿದ್ದೇವೆ.

ಅಧ್ಯಕ್ಷರು : – ನಿಯಮದಲ್ಲಿ ಕೊಡಬೇಕೆಂದು ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : – ಸಾಕಷ್ಟು ಉತ್ತರಗಳನ್ನು ದೊರಕಿಸಿಕೊಟ್ಟಿದ್ದೇವೆ. ಇವತ್ತು 99 ಪ್ರಶ್ನೆಗಳಲ್ಲಿ 91 ಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ನಮ್ಮ ಸಚಿವರುಗಳು ಹಾಗೂ ಕಾರ್ಯಾಲಯಗಳು ಸಾಕಷ್ಟು ಪ್ರಶ್ನೆಗಳಿಗೆ ಉತ್ತರಗಳನ್ನು ಸಮರ್ಪಕವಾದ ಕಾಲಮಿತಿಯೊಳಗೆ ಕೊಡುವುದಕ್ಕೆ ಬೇಕಾದಂತ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಆದಾಗ್ಯೂ ಇವತ್ತು ಎಂಟು ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ನಿನ್ನೆ ಮೊನ್ನೆ ಏನಾಗಿದೆಯೇ ಅವೆಲ್ಲವನ್ನೂ ಸಹ ನಾವು ಈ ಸದನ ಮುಗಿಯುವುದರೊಳಗೆ ತಲುಪಿಸುವ ವ್ಯವಸ್ಥೆಯನ್ನು ಮಾಡುತ್ತೇವೆ. ಆಕಸ್ಮಿಕವಾಗಿ ಕೆಲವೊಂದಕ್ಕೆ ಸಮಯ ತೆಗೆದುಕೊಂಡಿದ್ದರೆ ನಂತರವಾದರೂ ಸಹ ಸದಸ್ಯರುಗಳಿಗೆ ತಲುಪಿಸಿ ಕೊಟ್ಟೇ ಕೊಡುತ್ತೇವೆ. ಯಾವುದೇ ಸಂದರ್ಭಗಳಲ್ಲಿಯೂ ಪ್ರಶ್ನೆಗಳಿಗೆ ಉತ್ತರ ಕೊಡಬಾರದೆಂಬ ಉದ್ದೇಶ ಸರ್ಕಾರಕ್ಕಿಲ್ಲ.

ಶ್ರೀ ಕೃಷ್ಣ ಬೈರೇಗೌಡ : – ನನ್ನ ಪ್ರಶ್ನೆ ಮಂಗಳವಾರ ಬಂದಿದ್ದು, ಎರಡು ಪ್ರಶ್ನೆಗಳಿಗೆ ಉತ್ತರ ಕೊಟ್ಟು ಎರಡನ್ನು ತಡೆ ಹಿಡಿದಿದ್ದರು. ಇಲ್ಲಿಯವರೆಗೆ ಉತ್ತರ ಒದಗಿಸಿಲ್ಲ. ಉತ್ತರ ಒದಗಿಸದಿರುವ ಸಂದರ್ಭದಲ್ಲಿ ಏನೇನೋ ಊಹೆ ಮಾಡಿಕೊಂಡು ಆರೋಪ ಮಾಡುವುದು ಸರಿಯಿಲ್ಲ. ಆದರೆ ಉತ್ತರ ಕೊಡಿಲಿಲ್ಲವೆಂದರೆ ತಮಗೆ ಉತ್ತರ ಕೊಡುವ ಉದ್ದೇಶವಿಲ್ಲವೆಂಬ ಅನುಮಾನ ಬಂದೇ ಬರುತ್ತದೆ. ಇದಕ್ಕೆ ಕಾರಣ ಅದರಲ್ಲಿ ಏನೇನು ವಿಚಾರಗಳು ಅಡಗಿದೆ. ಆ

ವಿಚಾರಗಳು ಎಲ್ಲಿ ಹೊರಗೆ ಬರುತ್ತದೆಯೋ ಎಂದು ಉತ್ತರವನ್ನು ತಾವು ದಬಾವಣೆ ಮಾಡುತ್ತಿದ್ದೀರೆಂಬ ಶಂಕೆ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಉತ್ತರವನ್ನೇ ಕೊಡದಿದ್ದರೆ ನಾವು ಏನು ಮಾಡಬೇಕು ಹೇಳಿ. ಇಲ್ಲಾ ಕೊಡುವುದಿಲ್ಲವೆಂದು ಹೇಳಲಿ ನಾವು RTI ನಲ್ಲಿ ತೆಗೆದುಕೊಳ್ಳುತ್ತೇವೆ. ತಾವು ಒಬ್ಬ ಶಾಸಕರಾಗಿ ಹಿರಿಯವರಾಗಿ ಇಲ್ಲಿ ಕೆಲಸ ಮಾಡಿದ್ದೀರಿ ತಮಗೆ ಇಂತಹ ಸ್ಥಿತಿ ಬಂದರೆ ಏನಾಗಬಹುದೆಂದು ದಯವಿಟ್ಟು ಚಿಂತನೆ ಮಾಡಿ. ಮಂಗಳವಾರದ ನನಗ ಎರಡು ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ ದಯವಿಟ್ಟು ಸ್ವಲ್ಪ ಗಂಭೀರವಾಗಿ ಪರಿಗಣಿಸಿ ಉತ್ತರವನ್ನು ಕೊಡಿಸಿ.

ಅಧ್ಯಕ್ಷರು : – ಅವರಿಗೆ ಉತ್ತರವನ್ನು ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : – ಅವರಿಗೆ ಉತ್ತರವನ್ನು ದೊರಕಿಸಿಕೊಡಲಾಗುತ್ತದೆ ಮತ್ತು ಯಾವುದೇ ಕಾರಣಕ್ಕೂ ಗೌರವಾನ್ವಿತ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕೆಂಬ ಸನಿಶ್ಚಯ ನಮ್ಮ ಸರ್ಕಾರಕ್ಕಿದೆ ಯಾವುದೇ ಮಾಹಿತಿಯನ್ನು ಮುಚ್ಚಿಡಬೇಕು ಅದನ್ನು ಕೊಡಬಾರದೆಂಬ ಯಾವ ಧೋರಣೆಯ ನಮಗಿಲ್ಲವೆಂಬುದನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ.

ಶ್ರೀ ತನ್ವೀರ್ ಸೇಠ್ : – ತಡೆ ಹಿಡಿಯುವಂತ ಪ್ರಶ್ನೆಗಳು ಮತ್ತು ಉತ್ತರ ಕೊಡದಿರುವ ಪ್ರಶ್ನೆಗಳಿಗೆ ಸದನ ಮುಗಿದ ನಂತರ ಅದು ಹಾಗೇ ಹೋಗುತ್ತದೆ. ಆ ಪ್ರಶ್ನೆಗಳ ಹಿಂದೆ ಓಡಾಡುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಹಾಗಾಗಿ ಸರ್ಕಾರ ನಿಶ್ಚಯವಾಗಿ ಈ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಇಲ್ಲವೆಂದರೆ ಈಗೇನು ಸಮಿತಿಗಳು ನಡೆಯುತ್ತಿದೆ. ಅದಕ್ಕೆ subject committee ಆಗಿ ಮತ್ತೆ ಪರಿವರ್ತನೆ ಮಾಡಿದರೆ ಅನೇಕ ವಿಚಾರಗಳನ್ನು ಸಮಿತಿಗಳಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : – ಮಾನ್ಯ ಅಧ್ಯಕ್ಷರೆ, ಮೊನ್ನೆ ಪ್ರಶ್ನೆಗಳಿಗೆ ಶೂನ್ಯ ವೇಳೆಯಲ್ಲಿ ಇವತ್ತು ಉತ್ತರ ಕೊಡಿಸಿ.

ಅಧ್ಯಕ್ಷರು : ಕೊಡಿಸುತ್ತೇನೆ. ಶ್ರೀ ಗೂಳಿಹಟ್ಟಿ ಡಿ. ಶೇಖರ್‌ರವರು ಮಾತನಾಡಿ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : – ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಬ್ಬಿಣ, ಮ್ಯಾಂಗನೀಸ್, ಲೈಮ್ ಸ್ಟೋನ್ ಇತರೆ ಗಣಿ ಗುತ್ತಿಗೆಗಳನ್ನು ಹೊಸದಾಗಿ ಮಂಜೂರು ಮಾಡಬಾರದು ಮತ್ತು ನವೀಕರಣ ಮಾಡಬಾರದು ಹೊಸ ಖನಿಜಗಳನ್ನು ಸೇರ್ಪಡೆಗೊಳಿಸಬಾರದು ಮತ್ತು ಕೇಂದ್ರ ಸರ್ಕಾರಕ್ಕೆ